ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಪ್ರತಿವಾದಿಯರ ಪರ ವಕೀಲರಿಂದಃ-

ಪ್ರತಿವಾದಿಗಳು ಸುಮಾರು 4 ವರ್ಷಗಳಿಂದ ನಮಗೆ ತೊಂದರೆ ಕೊಡುತ್ತಿದ್ದರು ಆ ಬಗ್ಗೆ ಪೊಲೀಸ್ ಠಾಣೆಗೆ ದೂರು ನೀಡಿರುತ್ತೇವೆ. 2015-2016 ನೇ ಸಾಲಿನಲ್ಲಿ ಸರ್ವೇಯರ್ ಬಂದು ಜಮೀನು ಅಳತೆ ಹದ್ದುಬಸ್ತು ಮಾಡಿ ಕಲ್ಲನ್ನು ನೆಟ್ಟಿರುತ್ತಾರೆ ಎಂದರೆ ಸರಿಯಲ್ಲ. 2015-2016 ನೇ ಇಸವಿಯಲ್ಲಿ 8 ಗುಂಟೆ ಸ್ವತ್ತು ಪ್ರತಿವಾದಿ ಲಕ್ಷ್ಮಣ ಮತ್ತು 10 ಗುಂಟೆ ಆಣೆಮುದ್ದಯ್ಯನವರಿಗೆ ಸೇರಿತ್ತು ಎಂದು ನಮಗೆ ತಿಳಿದಿತ್ತು ಎಂದರೆ ಸರಿಯಲ್ಲ. ನಮ್ಮ ತಾಯಿಗೆ ಮಾರಾಟ ಮಾಡಿರುವ ಲಕ್ಷ್ಮಮ್ಮನವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸರ್ವೇ ನಂಬರ್ 14/1 ರಲ್ಲಿ ಇರುವ ಕಿಕ್ಕೇರಿ ತಮ್ಮಯ್ಯ, ಬೋರಮ್ಮ, ಕುಮಾರ್ ರವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸರ್ವೇ ನಂಬರ್ 14/1 ರಲ್ಲಿ ಸದರಿ ಕ್ಕಿಕ್ಕೇರಿ ತಮ್ಮಯ್ಯ, ಬೋರಮ್ಮ ಮತ್ತು ಕುಮಾರ್ ರವರು 1 ಎಕರೆ 2 ಗುಂಟೆ ಸ್ವತ್ತಿನ ಸ್ವಾಧೀನದಲ್ಲಿ ಇದ್ದರು ಎಂದರೆ ಸಾಕ್ಷಿ ಅವರು ಎಷ್ಟು ವಿಸ್ತೀರ್ಣದ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಆಣೆಮುದ್ದಯ್ಯ, ಕಿಕ್ಕೇರಿ ತಮ್ಮಯ್ಯ, ಬೋರಮ್ಮ, ಕುಮಾರ್ ಮತ್ತು 7 ನೇ ಪ್ರತಿವಾದಿ ರವರ ಹೆಸರಿಗೆ ಆದ ಕ್ರಯ ಪತ್ರಗಳನ್ನು ನಾನು ಪ್ರಶ್ನಿಸಿರುವುದಿಲ್ಲ ಎಂದರೆ ಸಾಕ್ಷಿಯು 1967 ರಲ್ಲಿ ನಾವು ಜಮೀನಿನಲ್ಲಿ ಇದ್ದೆವೋ ಅದೇ ಚಕ್‌ಬಂದಿ 1967 ರಲ್ಲಿ ಇರುತ್ತದೆ.

ನಾವು ಹಾಜರುಪಡಿಸಿರುವ ಪಹಣಿ ಪತ್ರಿಕೆಗಳಲ್ಲಿ ದಿನಾಂಕ 24.01.1969 ರಂದು ಸರ್ವೇ ನಂಬರ್ 14/ಎ, 14/1, 14/2 ಮತ್ತು

14/ಬಿರಂತೆ ಪೋಡಿ ಆದೇಶವನ್ನು ಪ್ರಶ್ನಿಸಿರುವುದಿಲ್ಲ ಎಂದರೆ ಸಾಕ್ಷಿ ಡಿ.ಡಿ.ಎಲ್. ಆರ್ ಮುಂದೆ ನಾವು ಪ್ರಕರಣ ದಾಖಲಿಸಿರುತ್ತೇವೆ ಎಂದು ನುಡಿಯುತ್ತಾರೆ. ಪಹಣಿ ಪತ್ರಿಕೆಯಲ್ಲಿ ತೋರಿಸಲಾಗಿರುವ ಸಿದ್ದಪ್ಪ ಆಣೆಮುದ್ದಯ್ಯ, ಕಿಕ್ಕೇರಿ ತಮ್ಮಯ್ಯ, ಬೋರಮ್ಮ, ಕುಮಾರ್ ರವರಿಗೆ ಆಗಿರುವ ಕ್ರಯ ಪತ್ರವನ್ನು ನಾನು 2018 ರವರಿಗೆ ಪ್ರಶ್ನಿಸಿರುವುದಿಲ್ಲ ಎಂದರೆ ಸಾಕ್ಷಿ ಡಿ.ಡಿ.ಎಲ್.ಆರ್ ಮುಂದೆ ಪ್ರಶ್ನಿಸಿರುತ್ತೇವೆ ಎಂದು ನುಡಿಯುತ್ತಾರೆ. ದಾವೆ ಸಲ್ಲಿಸುವ 50-55 ವರ್ಷಗಳ ಹಿಂದೆ ಕ್ರಯ ಪತ್ರಗಳು ಆಗಿರುತ್ತವೆ ಎಂದರೆ ಸರಿ.

ನಿಪಿ-3 ರ ಕ್ರಯಪತ್ರದಲ್ಲಿ ಷಡ್ಯೂಲ್ ಸ್ವತ್ತಿನ ಚಕ್‌ಬಂದಿ ಪೂರ್ವಕ್ಕೆ ರಾಜಶೇಖರಯ್ಯ. ಪಶ್ಚಿಮಕ್ಕೆ ಇದೇ ನಂಬರ್ ಪೈಕಿ ನನ್ನ ಬಾಬ್ತು ಜಮೀನು, ಉತ್ತರಕ್ಕೆ ಕೋಡಿ ಹಳ್ಳ ಮತ್ತು ದಕ್ಷಿಣಕ್ಕೆ ಈರೇಗೌಡರ ಕೆರೆಗೆ ಹೋಗುವ ಓಣಿ ಎಂದು ನಮೂದು ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ದಕ್ಷಿಣಕ್ಕೆ ಈರೇಗೌಡರ ಕರೆಗೆ ಹೋಗುವ ಓಣಿ ಎಂದು ನಮೂದಾಗಿರುವುದಿಲ್ಲ ಎಂದರೆ ಸಾಕ್ಷಿ ದಾರಿ ಎಂದು ಇರುತ್ತದೆ ಎಂದು ನುಡಿಯುತ್ತಾರೆ. ನಾವು ತಾಯ ಖರೀದಿಸಿರುವ ಕ್ರಯ ಪತ್ರದಲ್ಲಿ ತೋರಿಸಿರುವ ಸ್ವತ್ತಿನ ಚಕ್‌ಬಂದಿಗೂ ಮತ್ತು ದಾವಾ ಆಸ್ತಿಯ ಚಕ್‌ಬಂದಿಗೂ ತಾಳೆಯಾಗುತ್ತಿಲ್ಲ ಎಂದರೆ ಸರಿಯಲ್ಲ. ನಿಪಿ-5 ರಿಂದ ನಿಪಿ-9 ರ ದಾಖಲೆಗಳು ತಹಶೀಲ್ದಾರ್ ರವರ ಕಛೇರಿ ನೀಡಿರುವಂತಹ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ನಾವೇ ಸೃಷ್ಟಿಸಿಕೊಂಡು ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ.

ದಿನಾಂಕ 16.07.2024 ರಲ್ಲಿ ಮಾನ್ಯ ಡಿ.ಡಿ.ಎಲ್.ಆರ್ ಮುಂದೆ ನಾವು ದಾಖಲಿಸಿರುವ 186/2021-2022 ರಲ್ಲಿ ವಜಾಗೊಳಿಸಲಾಗಿರುತ್ತದೆ

ಎಂದರೆ ಸರಿಯಲ್ಲ. ಆ ಮೇಲ್ಕಂಡವು ವಜಾ ಆಗಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಗೆ ಸೇರಿದ 8 ಗುಂಟೆ ಸ್ವತ್ತಿನಲ್ಲಿ ನಿಮ್ಮ ತಾಯಿಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ದಾವೆ ಆಸ್ತಿಗೆ ಸಂಬಂಧಿಸಿದಂತೆ ಹಕ್ಕು ಇರುವಂತೆ ದಾಖಲೆಗಳನ್ನು ಹಾಜರುಪಡಿಸಿಲ್ಲದೇ ಇದ್ದರೂ ಸಹ ಯಾವುದೇ ಹಕ್ಕು ಘೋಷಣೆ ದಾವೆ ಸಲ್ಲಿಸಲು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ಯಾವತ್ತಿಗೂ ನಿಮ್ಮ ಸ್ವಾಧೀನಕ್ಕೆ ತೊಂದರೆ ನೀಡಿಲ್ಲದೇ ಇದ್ದುದರಿಂದ ನೀವು ಶಾಶ್ವತ ನಿರ್ಭಂಧಕಾಜ್ಞೆ ಕೋರಲು ಇರುವುದಿಲ್ಲ ಎಂದರೆ ಸರಿಯಲ್ಲ. ನಾನೇ ಅಳತೆ ಕಲ್ಲುಗಳನು ಕಿತ್ತುಹಾಕಿರುವುದರಿಂದ ದಾವೆ ಸಲ್ಲಿಸಲು ವ್ಯಾಜ್ಯ ಕಾರಣ ಉಂಟಾಗಿರುತ್ತದವೇ ವಿನಃ ಪ್ರತಿವಾದಿಗಳು ಕಾರಣಗಳಾಗಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿಗೆ ಕಣ್ಣುಗಳು ಚೆನ್ನಾಗಿ ಕಾಣುತ್ತದೆ ಎಂದರೆ ಸುಮಾರಾಗಿ ಕಾಣುತ್ತದೆ ಎಂದು ನುಡಿಯುತ್ತಾರೆ.

ಮರು ವಿಚಾರಣೆ ಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.